‘ನನ್ನದೂ ಅದೇ ಕಥೆ. ಪುಸ್ತಕ ಮಾರಾಟ ಆಗುತ್ತಿಲ್ಲ, ಮನೇಲಿ ಇಡಲು ಜಾಗವಿಲ್ಲ. ನಮ್ಮದು ಸಿಂಗಲ್ ಬೆಡ್ ರೂಂ ಮನೆ. ಬೆಡ್ ರೂಂ ತುಂಬಾ ಪುಸ್ತಕಗಳನ್ನು ತುಂಬಿ ನಾನು ನನ್ನ ಹೆಂಡ್ತಿ ಹಾಲ್‌ನಲ್ಲಿ ಮಲಗುತ್ತಿದ್ದೇವೆ. ಮನೆಗೆ ನೆಂಟರು ಬಂದರೆ ಮಲಗಲು ಜಾಗ ಇಲ್ಲರೀ’ ಎಂದು ಗಡ್ಡದ ಸಾಹಿತಿ ತಲೆ ಕೆರೆದುಕೊಂಡರು.

‘ಮೊನ್ನೆ ಹಬ್ಬಕ್ಕೆ ಮನೆ ಕ್ಲೀನ್ ಮಾಡೋ ನೆಪದಲ್ಲಿ ಹೆಂಡತಿ ನನ್ನ ಪುಸ್ತಕಗಳನ್ನು ರದ್ದಿ ಪೇಪರ್‌ನವನಿಗೆ ಕೊಟ್ಟು, ಬಂದ ಹಣದಲ್ಲಿ ಹೊಸ ರೇಜರ್ ತಂದು ಕೊಟ್ಟು, ಇನ್ಮೇಲಾದ್ರೂ ಕಾಲಕಾಲಕ್ಕೆ ಶೇವಿಂಗ್ ಮಾಡಿಕೊಳ್ಳಿ ಅಂದುಬಿಟ್ಟಳು’ ಎಂದು ಮಗದೊಬ್ಬ ಸಾಹಿತಿ ನುಣುಪಾದ ಗಲ್ಲ ಸವರಿಕೊಂಡರು.

‘ಪರಿಸ್ಥಿತಿ ಹೀಗೇ ಮುಂದುವರೆದರೆ ಮುಂದಿನ ಜನರೇಷನ್ ಸಾಹಿತ್ಯ ಮರೆತುಬಿಡುತ್ತದೆ. ಸಾಹಿತ್ಯಕ್ಕೆ ಗಂಡಾಂತರ ಬಂದೊದಗುತ್ತದೆ. ನಮ್ಮ ಸಮಸ್ಯೆಯನ್ನು ಸರ್ಕಾರದ ಮುಂದಿಡಬೇಕು’ – ಇದು ದೊಡ್ಡ ಸಾಹಿತಿಯ ಸಲಹೆ.

‘ಹೌದೌದು, ಸಾಹಿತಿಗಳ ಸಮಸ್ಯೆ ರೈತರ ಸಮಸ್ಯೆಗಿಂತಾ ಕಮ್ಮಿ ಅಲ್ಲ ಅಂತ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಟ್ಟು ಪರಿಹಾರ ಕೇಳಬೇಕು’ ಎಂದು ಇನ್ನೊಬ್ಬರು ದನಿಗೂಡಿಸಿದರು.

**ಸಾಹಿತ್ಯ ಕಾರ್ಯಕ್ರಮಗಳತ್ತ ಜನ ತಲೆ ಹಾಕುತ್ತಿಲ್ಲ. ಹೀಗಾದರೆ ಸಾಹಿತ್ಯ–ಸಂಸ್ಕೃತಿಯ ಗತಿಯೇನು? ಜನರನ್ನು ಸಾಹಿತ್ಯ ಕಾರ್ಯಕ್ರಮಗಳಿಗೆ ಕರೆತರುವುದು ಹೇಗೆ ಎನ್ನುವ ಪ್ರಶ್ನೆಗೆ ಉತ್ತರ ಹುಡುಕಲು ಇತ್ತೀಚೆಗೆ ಗುಪ್ತಸ್ಥಳದಲ್ಲಿ ಸಾಹಿತಿಗಳ ಸಭೆ ನಡೆಯಿತು. ಅಲ್ಲೇನಾಯಿತು ಗೊತ್ತೇ?**

‘ಸಾಲ ಮಾಡಿ ಪುಸ್ತಕ ಪ್ರಕಟಿಸಿರುವ ಸಾಹಿತಿಗಳ ಸಾಲ ಮನ್ನಾ ಮಾಡಿ ಅಂತ ಒತ್ತಾಯ ಮಾಡೋಣ. ಎಲ್ಲ ಬ್ಯಾಂಕುಗಳು ಸಾಹಿತಿಗಳಿಗೆ ಮುಲಾಜಿಲ್ಲದೆ ಸಾಲ ಕೊಡುವಂತೆ ಸರ್ಕಾರ ಆದೇಶ ಮಾಡಬೇಕು. ಕೊಟ್ಟ ಸಾಲ ಮನ್ನಾ ಮಾಡುವ ನೀತಿ ಜಾರಿಗೆ ತರಬೇಕು ಎಂದು ಆಗ್ರಹಿಸೋಣ’ ಎಂದು ಕುರುಚಲು ಗಡ್ಡದ ಬೆಳೆಯ ಸಾಹಿತಿ ಅಭಿಪ್ರಾಯಪಟ್ಟರು.

‘ಸರ್ಕಾರ ಸಾಹಿತಿಗಳಿಗೆ ಯಾವುದೇ ಅನುದಾನ ಕೊಡದಿದ್ದರೂ ಪರವಾಗಿಲ್ಲ. ಜನ ಭಾಗ್ಯ ಯೋಜನೆ ಜಾರಿಗೆ ತಂದು, ಸಾಹಿತ್ಯ ಕಾರ್ಯಕ್ರಮಗಳಿಗೆ ಜನದಾನ ಕೊಟ್ಟರೆ ಸಾಕು. ಸಾಹಿತಿಗಳು ಜನಭರಿತ ಕಾರ್ಯಕ್ರಮಗಳನ್ನು ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು’ ಅಂದರು ಇನ್ನೊಬ್ಬರು.

‘ನನಗೇನೋ ಇದು ಸರ್ಕಾರಿ ಸಮಸ್ಯೆಯಲ್ಲ, ಖಾಸಗಿ ಸಮಸ್ಯೆ ಎನಿಸುತ್ತದೆ, ನಾವೇ ಸಾಲ್ವ್ ಮಾಡಿಕೊಂಡರೆ ಉತ್ತಮ...’ ಎಂದೊಬ್ಬರು ತಮ್ಮ ಬೋಳುತಲೆ ಸವರಿಕೊಂಡರು.

‘ಹೌದು, ಕಾರ್ಯಕ್ರಮಕ್ಕೆ ಜನ ಕಳಿಸಿ ಅಂತ ಕೇಳಿದ್ರೆ ಸರ್ಕಾರ ಜನರನ್ನ ಎಲ್ಲಿ ಹೊಂಚಿ ಕಳಿಸುತ್ತದೆ. ರಾಜಕೀಯ ಕಾರ್ಯಕ್ರಮಗಳಂತೆ ಸಾಹಿತ್ಯ ಫಂಕ್ಷನ್‌ಗಳಿಗೆ ನಾವು ಬಸ್ಸು–ಲಾರಿ ಕಳಿಸಿ, ದುಡ್ಡು ಕೊಟ್ಟು ಜನರನ್ನು ಕರೆಸಲು ಆಗೊಲ್ಲ. ನಮ್ಮ ಕಾರ್ಯಕ್ರಮಗಳಿಗೆ ನಮ್ಮ ಹೆಂಡ್ತಿ ಮಕ್ಕಳೇ ಬರಲು ಆಸಕ್ತಿ ತೋರುತ್ತಿಲ್ಲ. ಇನ್ನು ಕಂಡೋರು ಬರ್‍ತಾರಾ? ಸಾಹಿತಿಗಳಾದ ನಾವು ಜನಸ್ನೇಹಿಗಳಾಗಬೇಕು, ಜನ ಸಂಪಾದನೆ ಮಾಡಿಕೊಳ್ಳಬೇಕು, ಜನರನ್ನು ಸೆಳೆಯುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು’ ಅಂದರು ಮತ್ತೊಬ್ಬರು.

‘ಉದ್ಘಾಟನೆ, ಅಧ್ಯಕ್ಷತೆ, ಕೃತಿ ಬಿಡುಗಡೆ ಮಾಡಲು ವೇದಿಕೆ ಮೇಲೆ ಅವಕಾಶ ಮಾಡಿಕೊಟ್ಟರೆ ಮಾತ್ರ ಸಾಹಿತಿಗಳು ಬರುತ್ತಾರೆ, ಪ್ರೇಕ್ಷಕರಾಗಿ ಅತ್ತ ತಲೆ ಹಾಕೊಲ್ಲ. ನಮ್ಮಲ್ಲಿ ಇಂತಹ ನಡವಳಿಕೆ ತಪ್ಪಬೇಕು, ಕೊಟ್ಟು ತಗೊಳೊ ರೀತಿ ಒಬ್ಬರ ಕಾರ್ಯಕ್ರಮಕ್ಕೆ ಮತ್ತೊಬ್ಬರು ಬಂದರೆ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ...’ ಎಂದು ಮರಿ ಸಾಹಿತಿಯೊಬ್ಬರು ಹೇಳಿದಾಗ ಅನೇಕ ಹಿರಿಯರು ಹುಬ್ಬು ಗಂಟಿಕ್ಕಿದರು.

‘ಮುಚ್ರೆ ಬಾಯಿ. ನೂರೈವತ್ತು ಪುಸ್ತಕ ಬರೆದಿರುವ ನಾನು ಸಾಮಾನ್ಯ ಪ್ರೇಕ್ಷಕನಂತೆ ಬಂದು ಕೂರಬೇಕೇನ್ರೀ? ನನ್ನ ಮರ್ಯಾದೆ ಏನಾಗಬೇಕು...’ ಎಂದು ಸಿಡಿದರು ಹಿರಿಯ ಸಾಹಿತಿ.

‘ನಾನೇನು ಕಡಿಮೆಯಿಲ್ಲ. ಮುನ್ನೂರರ ಕೃತಿಕಾರ ನಾನು. ನೂರಾರು ಪ್ರಶಸ್ತಿ ನನ್ನನ್ನ ಹುಡುಕಿಕೊಂಡು ಬಂದಿವೆ. ನನ್ನ ಘನತೆ ತಿಳಿದು ಮಾತನಾಡಿ’ ಎಂದು ಮತ್ತೊಬ್ಬರು ರೇಗಿದರು.

‘ಕೂತ್ಕೊಳ್ರಿ. ನಿಮ್ಮ ಘನತೆ ನಾನೂ ಕಂಡಿದ್ದೀನಿ. ಹೆಂಗೆಂಗೆ ನೀವು ಪ್ರಶಸ್ತಿ, ಪುರಸ್ಕಾರ ತಗೊಂಡಿದ್ದೀರಿ ಅಂತ ನನಗೂ ಗೊತ್ತು’ ಎಂದು ದೊಡ್ಡ ಸಾಹಿತಿ ಅಬ್ಬರಿಸಿದರು.

‘ನೀವೂ ಅಷ್ಟೆ, ನನಗೆ ಸಿಗಬೇಕಾದ ಪ್ರಶಸ್ತಿಯನ್ನು ಲಾಬಿ ಮಾಡಿ ತೊಗೊಂಡಿದ್ದು ಊರಿಗೆಲ್ಲಾ ಗೊತ್ತು ಬಿಡಿ’ ಎಂದು ಮತ್ತೊಬ್ಬರು ಮಾತು ಒಗೆದರು.

ವಾದ ವಿವಾದವಾಗಿ, ವಿವಾದ ವಿಕೋಪಕ್ಕೆ ಹೋಯಿತು. ಎಲ್ಲ ಸಾಹಿತಿಗಳು ಸಭೆ ಬಹಿಷ್ಕರಿಸಿ ಹೊರನಡೆದರು. ■

